ಕಡೂರು ಡಿಸ್ಟ್ರಿಕ್ಟು.

1909ನೆ ಸಪ್ಟೆಂಬರ್ ತಾರೀಖು 4.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—1909ನೆ ಇಸವಿ ನವೆಂಬರು ಗುರ್ತೇ ಲಾಗಾಯಿತು 1910ನೆ ಇಸವಿ ಜೂನ್ ಆಖ್ಯೆರ ವರೆಗೆ ಆಗುವ 8 ತಿಂಗಳಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಮೂಡಗೆರೆ ತಾಲ್ಲೂಕು ಕೊಟ್ಟಿಗೆಹಾರ (ಬೋದು ಫೋಟ್) ಟೋಲ್ ಗೇಟಿನಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಮೂಡಗೆರೆ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಅಕ್ಟೋಬರು 2ನೆ ತಾರೀಖು ಶನಿವಾರ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಎಲ್ಲಾ ಸಮಾಲಗಳಿಗಿಂತಲೂ ಜಾಸ್ತಿಯಾದ ಛಡ ದರಖಾಸ್ತು ಸರಿಯಾಗಿ ಕಂಡುಬಂದಲ್ಲಿ ಗವರ್ನಮೆಂಟ್ ಮಂಜೂರಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ ಸಾಹೇಬರಿನಿಂದ ಅಂಗೀಕರಿಸಲ್ಪಡುತ್ತೆ. ಛಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬಿನ್ನು ತೋರಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

3. ಛಡ ದರಖಾಸ್ತುದಾರನು ಹರಾಜುದ ಕೂಡಲೆ ಹರಾಜು ವೊಬಲಗಿನ ಪೈಕಿ ನಾಲ್ಕನೆ ಬಂದು ಅಂಶದ ವೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಮಾನತಿ ಮಾಡಬಹುದೆಂಬ ಷರಾ ಬರಿಸುಲ್ಪಟ್ಟ ಗವರ್ನಮೆಂಟ್ ಆಫ್ ಇಂಡಿಯಾ ಪ್ರೊನೋಟು ಮೂಲಕವಾಗಿ ತಿರಾಜಿಪ್ಪು ಇಡಬೇಕು. ಹಾಗೂ ರೂಪಾಯಿ ಬಂದರ ಒಡ್ಡಾಣೆಯಂತೆ ಆ ವೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನಮೆಂಟಿನಿಂದ ಹರಾಜು ಮಂಜೂರಾಗಿ ಬಂದ ಕೂಡ್ಲೆ ಬಾಕಿ ವೊಬಲಗನ್ನು ಲೋಕಲ್ ಸೆಸ್ ನಿಸಿದರಿ ವೊಬಲಗನ್ನು ಮೂಡಿಗರೆ ತಾಲ್ಲೂಕು ಖಜಾನೆಗೆ 1909ನೆ ಡಿಸೆಂಬರ್ ತಾರೀಖು 15ರ ಲಾಗಾಯಿತು ಸಮನಾದ 6 ಕಿಸ್ತುಗಳಾಗಿ ಪ್ರತಿ ತಿಂಗಳ 15ನೆ ತಾರೀಖಿಗೆ ಮಾನತಿ ಮಾಡಬೇಕು. ತಿರಾಜಟ್ಟಿನ ವೊಬಲಗು ಆಖ್ಯೆರು 2 ಕಿಸ್ತುಗಳಿಗೆ ಜಮೆ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೇವಾರ ಕಿಸ್ತು ವೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಇಬ್ಬರನ್ನು ಜಾಮೀನು ಕೊಡಬೇಕು. ಮತ್ತು ಹರಾಜು ಮಂಜೂರು ಸಂಗತಿ ತಿಳಿದ ತಾರೀಖು ಲಾಗಾಯಿತು 8 ದಿವಸದ ಒಳಗ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರದುಕೊಡಬೇಕು. ಶೇವಣಿ ಇಡದೆ ಇದ್ದರೆ ಅಥವಾ ಜಾಮೀನು ಕೊಡದೆ ಇದ್ದರೆ ತಿರಾಜಟ್ಟು ವೊಬಲಗು ದಂಡವಾಗಿ ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಸದರಿ ಕಂಟ್ರಾಕ್ಟು 2ನೆ ಹರಾಜು ಮಾಡಲ್ಪಡುವುದು. ಹೀಗೆ ಮಾಡಿದ್ದರಲ್ಲಿ ಸರಕಾರಕ್ಕೆ ಲುಕ್ಸಾನು ಸಂಭವಿಸಿದಲ್ಲಿ ಕಂಟ್ರಾಕ್ಟುದಾರನ ಅಥವಾ ಅವನ ಜಾಮೀನುದಾರರ ಜಿಂದಿಗೆ ಹರಾಜು ಮಾಡಿಸಿ ವಸೂಲು ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹೆಯಲ್ಲಿಯೂ ಕೊಡತಕ್ಕ ಕಿಸ್ತು ವೊಬಲಗನ್ನು ಗೊತ್ತುಮಾಡಲ್ಪಟ್ಟ ತಾರೀಖಿನೊಳಗಾಗಿ ಮಾನತಿ ಮಾಡಲು ತಪ್ಪಿದರೆ ವರಸ ಬಂದಕ್ಕೆ ಶೇಕಡಾ ಆರು ರೂಪಾಯಿ ಮೇರೆ ಬಡ್ಡಿ ಸೇರಿಸಿ ಕಿಸ್ತು ವೊಬಲಗು ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಪಡೆಯುವ ವೊಬಲಗಿನ ಮೇಲೆ ರೂಪಾಯಿ 1ಕ್ಕೆ ಬಂದಾಣೆಯಂತೆ ಲೋಕಲ್ ಸೆಸ್ ಕೊಡಲಿಕ್ಕೆ ಬದ್ಧನಾಗಿರುತ್ತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನುದಾರ್ರಿಂದ ಬಾಕಿ ವೊಬಲಗು ಬಾರದೆ ಇದ್ದಲ್ಲಿ ಲ್ಯಾಂಡ್ ರವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಪ್ರತಿ ದಿವಸದ ಟೋಲ್ ವಸೂಲ್ ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ಡೆಪ್ಯುಟಿ ಕಮಿಷನರ್ ಅಸಿಸ್ಟೆಂಟ್ ಕಮಿಷನರ್ ಮತ್ತು ಸದರಿ ಟೋಲ್ ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಅಮಲ್ದಾರ್ರ ತನಿಖೆಗೆ ಬಳಗಾಗಿರತಕ್ಕದ್ದು.

8. ಕಂಟ್ರಾಕ್ಟರು ಇದರಡಿ ಕಾಣಿಸಿರುವ ಷೆಡ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದೆ ಅನ್ಯಥಾ ಟೋಲ್ ಸುಂಕವನ್ನು ವಸೂಲ್ ಮಾಡಕೂಡದು. ಹಾಗೆ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದುಮಾಡಿಸುವದಲ್ಲದೆ ಕಂಟ್ರಾಕ್ಟುದಾರನನ್ನು ಕ್ರಿಮಿನಲ್ ತರಫು ಪ್ರಾಸಿಕ್ಯೂಷನ್ಗೆ ಗುರಿಪಡಿಸುತ್ತೆ.

9. ದಂಡು ಮಿಲಿಟರಿ ಸಾಮಾನು ಅಥವಾ ಸರ್ಕಾರಿ ಡ್ಯೂಟಿ ಮೇಲೆ ಪ್ರಯಾಣ ಮಾಡುವ ಪೋಲೀಸ್ ಯಾ ಇತರ ಉದ್ಯೋಗಸ್ಥರ ಸರಕಾರದ ಸಾಮಾನುಗಳು ಅಂದರೆ ಸಂಬಂಧಪಟ್ಟ ಇಲಾಖಾ ವೊಖ್ತೇಸರರ ಸರಟಿಫಿಕೇಟಿನಿಂ ಬರತಕ್ಕ ಸಾಮಾನುಗಳು ಇವುಗಳ ಮೇಲೆ ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡಕೂಡದು.

10. ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡುವ ಬಂದು ದರವಾರು ಪಟ್ಟಿಯನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರದು ಟೋಲ್‌ಗೇಟ್ ಬಳಿ ಚನ್ನಾಗಿ ಕಾಣುವ ಜಾಗಾದಲ್ಲಿ ತಗಲುಹಾಕಬೇಕು.

11. ಗವರ್ನಮೆಂಟಿನಿಂದ ನೇಮಿಸಲ್ಪಟ್ಟ ಟೋಲ್‌ಗೇಟು ಬಳಿಯಲ್ಲಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು.

12. ರವಿನ್ಯೂ ಇಲಾಖೆಯೊಂದಿಗೆ ಸುಂಕದ ತೆರಿಗೆ ವಿಚಾರದಲ್ಲಿ ಒಪ್ಪಂದ ಮಾಡಿಕೊಂಡ ಯಾವನೊಬ್ಬ ಸಿಂದಲು ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು. ಈರೀತಿ ರವಿನ್ಯೂ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡ ಪೊಬಲಗನ್ನು ಹೊಂದಲು ಕಂಟ್ರಾಕ್ಟುದಾರನು ಸ್ವತಂತ್ರವುಳ್ಳವನಾಗುತ್ತಾನೆ.

13. ಇನ್ನೂ ಜಾಸ್ತಿ ಅಂಶವೇನಾದರೂ ತಿಳಿಯಬೇಕಾದಲ್ಲಿ ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಬರೆಯುವದರ ಮೂಲಕ ತಿಳಿದುಕೊಳ್ಳಬಹುದು.

ಕೊಟ್ಟಿಗೆಹಾರು ಟೋಲಗೇಟು ಮೇಲೆ ವಸೂಲು ಮಾಡಬೇಕಾದ ದರಗಳ ಪಟ್ಟಿ.

ನಂಬರು.	ವಿವರ.	ರೂ.	ಆ.	ಪೈ.
1	ಪ್ರತಿ ನಾಲ್ಕು ಚಕ್ರದ ಬಂಡಿಗೆ	2	0	0
2	ಪ್ರತಿ ಎರಡು ಡಿಟೋ	1	0	0
3	ಪ್ರತಿ ಯಕ್ಕ ಮೇಲೂ	0	4	0
4	ಸ್ಪ್ರಿಂಗ್ ಯಾನೆ ಬಿಲ್ಲಿನಮೇಲೆ ಇರುವ ಬಾಡಿಗೆ ಬಂಡಿ ಪ್ರತಿ 1ಕ್ಕೆ	0	2	0
5	ಎಂಟು ಎತ್ತುಗಳಿಂದ ಯಾ ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರುಕತ್ತೆಗಳಿಂದ ಯಳಿಯಲ್ಪಡುವ ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಬಂಡಿ 1ಕ್ಕೆ ಭರ್ತಿಯಾಗಿದ್ದರೆ.	1	8	0
6	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	8	0
7	ಆರು ಎತ್ತುಗಳು ವಗೈರೆಗಳಿಂದ ಯಳಿಯಲ್ಪಟ್ಟ ಗಾಡಿ ವ ಬಾಡಿಗೆ ಬಂಡಿ 1ಕ್ಕೆ ಭರ್ತಿ ಆಗಿದ್ದರೆ...	0	12	0
8	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	6	0
9	ನಾಲ್ಕು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಹೇಸರುಕತ್ತೆಗಳಿಂದ ಯಳಿಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಬಂಡಿ 1ಕ್ಕೆ ಭರ್ತಿಯಾಗಿದ್ದರೆ.	0	8	0
10	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	4	0
11	2 ಎತ್ತುಗಳು ವಗೈರೆಯಿಂದ ಯಳಿಯಲ್ಪಟ್ಟ ಗಾಡಿ ಯಾ ಬಾಡಿಗೆ ಬಂಡಿ 1ಕ್ಕೆ ಭರ್ತಿಯಾಗಿದ್ದರೆ.	0	4	0
12	ಡಿಟೋ ಡಿಟೋ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರೆ ಹೊರಿಸಲ್ಪಟ್ಟಿದ್ದರೆ	0	1	0
14	ಡಿಟೋ ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ಒಂಟೆಗೂ ಹೊರೆ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದೆ ಇದ್ದರೆ	0	4	0
18	ಪ್ರತಿ ಕುದುರೆಗೂ ಜೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	1	6
19	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ಕುದುರೆಗೂ	0	0	9
20	ಪ್ರತಿ ತಟ್ಟು ಯಾ ಕೇಸರುಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	9
21	ಡಿಟೋ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ...	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6
23	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆ	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿಗೂ	0	0	1
25	ಎಂಟು ಬೋಯಿಗಳಿಂದನ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಗೂ	1	0	0
26	ಆರು ಬೋಯಿಗಳಿಂದನೆ ಪ್ರತಿ ಡೋಲಿ, ಪಾಲಕಿ, ಯಾ ಟಾಂಜಾನಿಗೂ	0	12	0
27	ನಾಲ್ಕು ಬೋಯಿಗಳಿಂದನೆ ಡಿಟೋ	0	8	0
28	ಇಬ್ಬರು ಬೋಯಿಗಳಿಂದನೆ ಡಿಟೋ	0	4	0

ನೋಟು :—ನಡೆದು ಬರುವ ಮಾರ್ಗಸ್ಥರ ಮೇಲೆ ಟೋಲ್ ಸುಂಕ ವಸೂಲ್ ಮಾಡತಕ್ಕದ್ದಲ್ಲಾ.

ಜಿ. ಹನುಮಂತರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ರ 1909—10ನೆ ಇಸವಿ ಮಿ|| ನಂಬರ್ 88.

ಹೊಸಕೋಟೆ ತಾಲ್ಲೂಕು ವಾಗಟದ ಅಗ್ರಹಾರದಲ್ಲಿದ್ದು ಮೃತಪಟ್ಟ ನಾರಣ್ಯೆಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕೃಷ್ಣಸಾಮ್ಯೆಯ್ಯಂಗಾರ್ರು, ಮೃತಪಟ್ಟ ಸದರಿ ನಾರಣ್ಯೆಯ್ಯಂಗಾರ್ರಿಗೆ ಮುಖ್ಯ ವಾರಸ್ದಾರರಾಗಬೇಕೆಂಬ ಹಕ್ಕುದಾರಿ ಮೇಲೆ ವಾಗಟದ ಸ್ಥಳದ ವಾಸಸ್ಥರಾಗಿ ಮೃತಪಟ್ಟ ನಾರಣ್ಯೆಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟ್ಯು ವೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣಸಾಮ್ಯೆಯ್ಯಂಗಾರ್ರ ಅರ್ಜಿಯನ್ನು ಸ್ರ 1909ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟವರ ಆಸ್ತಿಗೆ ಹಕ್ಕುದಾರರಾದ ಶಿಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1909ನೆ ಇಸವಿ ಸೆಪ್ಟಂಬರ್ ತಿಂಗಳು 3ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.